

ಲೀಮಾದಿಂದ ಕುಸ್ಕೊಗೆ ವಿಮಾನದಲ್ಲಿ ಪ್ರಯಾಣಿಸುವಾಗ ಕಿಟಕಿಯಿಂದ ಕಾಣುವ ಆಂಡಿಸ್ ಪರ್ವತ ಶ್ರೇಣಿಗಳ, ಕಣಿವೆಗಳ ದೃಶ್ಯ ವೈಭವ ಕಣ್ಣಿಗೆ ಹಬ್ಬ

# ಕುಸ್ಕೊ ಮಚುಪಿಚು ಹೆಬ್ಬಾಗಿಲು

**ಇಂಕಾ ವೈಭವದ ಕುರುಹಾಗಿ ಉಳಿದಿರುವ ಕುಸ್ಕೊ ದಕ್ಷಿಣ ಅಮೆರಿಕದ ಪಾರಂಪರಿಕ ನಗರ. ಇಂಕಾ ಮತ್ತು ಸ್ಪೇನ್ ಸಂಸ್ಕೃತಿಗಳ ಜುಗಲಬಂದಿಯನ್ನು ಕುಸ್ಕೊದಲ್ಲಿ ಕಾಣಬಹುದು.**

■ ಡಿ.ಜಿ. ಮಲ್ಲಿಕಾರ್ಜುನ

ಇಂಕಾ ಸಂಸ್ಕೃತಿಯ ರಾಜಧಾನಿಯಾಗಿ 13–15ನೇ ಶತಮಾನದವರೆಗೆ ವೈಭವವನ್ನು ಕಂಡ ನಗರ ಕುಸ್ಕೊ, ದಕ್ಷಿಣ ಅಮೆರಿಕದ ಸಮೃದ್ಧ ಪಾರಂಪರಿಕ ತಾಣ. ಆಂಡಿಸ್ ಪರ್ವತ ಶ್ರೇಣಿಯಲ್ಲಿ ಸಮುದ್ರಮಟ್ಟದಿಂದ 11,200 ಅಡಿ ಎತ್ತರದ ಕಣಿವೆಯಲ್ಲಿ ವಿಸ್ತಾರವಾಗಿ ಹರಡಿರುವ ನಗರವಿದು. ಸುತ್ತ ಬೆಟ್ಟಗಳು ಆವರಿಸಿದ್ದು, ಬೆಟ್ಟಗಳ ಮೇಲೆಲ್ಲಾ ನಗರ ಹಬ್ಬಿದೆ. 1985ರಲ್ಲಿ ಈ ನಗರವನ್ನು ವಿಶ್ವ ಪಾರಂಪರಿಕ ತಾಣವೆಂದು ಘೋಷಿಸಲಾಗಿದೆ.

ವಿಶ್ವದಲ್ಲೇ ಹೆಸರುವಾಸಿಯಾದ ಪೆರು ದೇಶದ ಐತಿಹಾಸಿಕ ಸ್ಥಳ ಮಚುಪಿಚುವಿಗೆ ಹೆಬ್ಬಾಗಿಲು ಈ ಕುಸ್ಕೊ ನಗರ. ಹಾಗಾಗಿ ಪ್ರತೀ ವರ್ಷ ಇಲ್ಲಿಗೆ 20 ಲಕ್ಷಕ್ಕೂ ಅಧಿಕ ಪ್ರವಾಸಿಗರು ಭೇಟಿ ನೀಡುವರು.

15ನೇ ಶತಮಾನದಲ್ಲಿ ಇಂಕಾ ರಾಜ ಪಚಕುಟಿಯ ಕಾಲದಲ್ಲಿ ರಾಜಧಾನಿಯಾದ ಮೇಲೆ ಕುಸ್ಕೊ ಸಂಸ್ಕೃತಿ, ಧರ್ಮ ಮತ್ತು ಕಲೆಯ ಕೇಂದ್ರವಾಗಿ ಉತ್ತುಂಗದತ್ತ ಸಾಗಿತು. ಇಂಕಾ ಸಂಸ್ಕೃತಿಯ ಉತ್ತುಂಗದ ಸ್ಥಿತಿಯಲ್ಲಿದ್ದಾಗ ಈ ನಗರವನ್ನು ಸ್ಪೇನ್ ವಶಪಡಿಸಿಕೊಂಡಿತು.

ಇಂಕಾ ಮತ್ತು ಸ್ಪೇನ್ ಸಂಸ್ಕೃತಿಗಳ ಸಮ್ಮಿಲನದಂತಿರುವ ಕುಸ್ಕೊ ನಗರದ ವಿನ್ಯಾಸಗಳಲ್ಲಿ ಎರಡೂ ಸಂಸ್ಕೃತಿಗಳನ್ನು ನಾವು ಕಾಣಬಹುದು. ಒಂದು ರೀತಿಯಲ್ಲಿ ಈ ನಗರ 16–17ನೇ ಶತಮಾನದ ಸ್ಪ್ಯಾನಿಶ್ ನಗರದ ಪ್ರತಿಕೃತಿಯಂತೆ ಕಂಡುಬರುತ್ತದೆ. ಕಿರಿದಾದ ರಸ್ತೆಗಳು, ನೆಲದ ಮೇಲಿನ ಕಲ್ಲುಹಾಸು, ಮನೆಗಳಿಗೆ ಬಳಿದಿರುವ ಕೆಂಪು ಕಂದು ಬಣ್ಣ, ಹೆಂಚಿನ ಛಾವಣಿ, ಮೊದಲ ಮಹಡಿಯಲ್ಲಿ ಮನೆಗಳ ಮೇಲೆ ನಿರ್ಮಿಸಿರುವ ಬಾಲ್ಕನಿ– ಇವುಗಳನ್ನು ಕಂಡಾಗ ಸ್ಪೇನ್‌ನಲ್ಲಿದ್ದಂತೆ ಅನ್ನಿಸುತ್ತದೆ.

ಹೆಂಗಸರು ಹಲವಾರು ಪದರಗಳಿರುವ, ಕೆಂಪು, ನೀಲಿ, ಹಳದಿ, ಬಿಳಿಯ ಬಣ್ಣಗಳ ಉದ್ದನೆಯ ಸ್ಕರ್ಟ್ ಧರಿಸುವರು. ಅದರ ಮೇಲೆ ಓವರ್ ಕೋಟು. ಕಪ್ಪು ಕೂದಲಿನ ಎರಡು ಜಡೆ ಹೆಣೆದು ತಲೆಗೆ ಬಣ್ಣದ ಟೋಪಿಯನ್ನು ಹಾಕಿರುತ್ತಾರೆ.

ಹಲವಾರು ಸಣ್ಣ ಸಣ್ಣ ನೀರಿನ ಝರಿಗಳು ಕುಸ್ಕೊ ಪರ್ವತಗಳಲ್ಲಿ ಹುಟ್ಟಿ, ವತನಾಯ್ ನದಿಯಾಗಿ ಹರಿಯುತ್ತದೆ. ಮುಂದೆ ಅದು ಮಚುಪಿಚು ಪಕ್ಕದಲ್ಲಿ ಹರಿಯುವ ಉರುಬಂಬಾ ನದಿಯನ್ನು ಸೇರುತ್ತದೆ. ಉರುಬಂಬಾ ಅಮೆಜಾನನ್ನು ಕೂಡಿಕೊಳ್ಳುತ್ತದೆ.

ಇಂಕಾಗಳ ಕೆಚುವಾ ಭಾಷೆಯಲ್ಲಿ ಕುಸ್ಕೊ ಎಂದರೆ ನಾಭಿ ಎಂದರ್ಥ. ಅವರು ತಮ್ಮ ರಾಜ್ಯದ ನಾಭಿಯಾದ ಈ ಪಟ್ಟಣವನ್ನು ಕ್ರಿ.ಶ. 1100ರಲ್ಲಿ ಸ್ಥಾಪಿಸಿ, ಸುತ್ತ ನಾಲ್ಕೂ ದಿಕ್ಕಿಗೂ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡು ಆಳಿದರು.

### ಪ್ಲಾಜಾ ಡೀ ಅರಮಾಸ್

ಕುಸ್ಕೊ ನಗರದ ಬಹುಮುಖ್ಯವಾದ ಮತ್ತು ದೊಡ್ಡದಾದ ಚೌಕ 'ಪ್ಲಾಜಾ ಡೀ ಅರಮಾಸ್'. ಇದರ ಮಧ್ಯದಲ್ಲಿ ಒಂದು ಕಾರಂಜಿ ಇದ್ದು, ಇಂಕಾ ದೊರೆ ಪಚಕುಟಿಯ ಪ್ರತಿಮೆ ನಿಲ್ಲಿಸಲಾಗಿದೆ.